# ಕಾಡು ಜೀರಿಗೆ

ಚಿತ್ರ– ಬರಹ:
**ಗುರುರಾಜ ಲಕ್ಷ್ಮಣ ಹಂದ್ರಾಳ**





ತಿಳಿನೇರಳೆ ಬಣ್ಣದ ಹೂ ಅಲ್ಲಲ್ಲಿ ಬೇಲಿಯಲ್ಲಿ ಗಮನ ಸೆಳೆದಿರಲಿಕ್ಕೂ ಸಾಕು. ಸೆಂಟ್ರಾಥೀರಂ ಆಂಥೆಲ್‌ಮಿಂಟಿಕಂ ಹೆಸರಿನ ಆಸ್ಟಿರೇಸಿ ಕುಟುಂಬಕ್ಕೆ ಸೇರಿದ ಈ ಗಿಡವನ್ನು ಕರೀಜೀರಿಗೆ, ಕಾಲಜೀರಿಗೆ, ಅಡವಿಜೀರಿಗೆ, ಅವಾಲ್ ಗುಜ್, ಕೃಷ್ಣಜೀರಿಕ, ಸೋಮರಾಜ, ಬಕ್ಚಿ, ಕಾಟ್ಟುಶಿರಗಂ ಮುಂತಾಗಿ ಹಲವು ಹೆಸರುಗಳಲ್ಲಿ ಕರೆಯುತ್ತಾರೆ.

ಒಂದು ಹೂ ಚೆಂಡಿನಲ್ಲಿ ಸುಮಾರು 40 ಹೂಗಳಿರುತ್ತವೆ. ತಿಳಿನೇರಳೆ ಬಣ್ಣದ ಹೂಗಳು ಚೆಂಡಿನ ರೀತಿಯಲ್ಲಿ ಪುಷ್ಪಮಂಜರಿಯ ಹಾಗೆ ಜೋಡಣೆ ಆಗಿರುತ್ತವೆ. ಎಲೆಗಳು ದೀರ್ಘ ವೃತ್ತಾಕಾರವಿದ್ದು ಅಂಚು ಗರಗಸದಂತೆ ಇರುತ್ತದೆ. ಎಲೆಗಳು, ರೆಂಬೆಗಳ ಮೇಲೆ ತುಪ್ಪಳದಂಥ ರೋಮಗಳಿರುತ್ತವೆ. ಈ ಗಿಡಮೂಲಿಕೆ 2–3 ಅಡಿ ಎತ್ತರ ಬೆಳೆಯುತ್ತದೆ. ಘಟ್ಟ ಪ್ರದೇಶ, ಬೀಳು ಭೂಮಿ, ಹುಲ್ಲುಗಾವಲಿನಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕೈತೋಟದಲ್ಲೂ ಬೆಳೆಯುತ್ತಾರೆ.

ಕಾಡು ಜೀರಿಗೆ ಗಿಡವು ಜೀರ್ಣಕಾರಕ ಹಾಗೂ ಶಕ್ತಿವರ್ಧಕವಾಗಿ ಉಪಯೋಗವಾಗುತ್ತದೆ. ಹಲವಾರು ಔಷಧೀಯ ಗುಣಗಳನ್ನೂ ಹೊಂದಿದೆ. ಸಂಧಿವಾತಕ್ಕೆ ಔಷಧಿ. ಚೇಳು ಕಡಿತದ ಜಾಗದಲ್ಲಿ ಎಲೆ ಮತ್ತು ಬೇರು ಅರೆದು ಲೇಪನ ಮಾಡಿದರೆ ಗುಣವಾಗುತ್ತದೆ. ಚರ್ಮ ರೋಗಗಳ ನಿವಾರಣೆಗೂ ಸಹಕಾರಿ. ಕಾಡು ಜೀರಿಗೆ ಬೀಜವನ್ನು ಅರೆದು ನಿತ್ಯ ರಾತ್ರಿ ಮುಖಕ್ಕೆ ಲೇಪಿಸಿ ಬೆಳಿಗ್ಗೆ ಮುಖ ತೊಳೆಯುವುದನ್ನು ಅಭ್ಯಾಸ ಮಾಡಿಕೊಂಡರೆ ಮುಖದ ಕಾಂತಿ ಹೆಚ್ಚುತ್ತದೆ. ಬೀಜದ ಮೂಲಕ ವಂಶಾಭಿವೃದ್ಧಿ ಆಗುವ ಈ ಗಿಡ ನಿಜಕ್ಕೂ ಬಹೂಪಯೋಗಿ.